ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2015–16ನೇ ಸಾಲಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ನೀಡುವ ಕುರಿತು.

ಉಲ್ಲೇಖಿಸಿದೆ:

1. ಸರ್ಕಾರದ ಆದೇಶ ಸಂಖ್ಯೆ:ಪಜ 39 ಹೆಚ್ಎಹೆಚ್ 2013, ದಿನಾಂಕ:25.05.2013
2. ಸರ್ಕಾರದ ಸುತ್ತೋಲೆ ಸಂಖ್ಯೆ:ಪಜ 51 ಹೆಚ್ಎಹೆಚ್ 2013, ದಿನಾಂಕ:5.08.2013.
3. ಸರ್ಕಾರದ ಆದೇಶ ಸಂಖ್ಯೆ:ಪಜ 206 ಹೆಚ್ಎಹೆಚ್ 2014, ದಿನಾಂಕ:2.09.2014.
4. ಸರ್ಕಾರದ ಆದೇಶ ಸಂಖ್ಯೆ:ಪಜ 251 ಹೆಚ್ಎಹೆಚ್ 2014, ದಿನಾಂಕ:17.03.2015
5. ಸರ್ಕಾರದ ಆದೇಶ ಸಂಖ್ಯೆ:ಪಜ 251 ಹೆಚ್ಎಹೆಚ್ 2014, ದಿನಾಂಕ:25.04.2015
6. ಸರ್ಕಾರದ ಆದೇಶ ಸಂಖ್ಯೆ:ಪಜ 77 ಹೆಚ್ಎಹೆಚ್ 2015, ದಿನಾಂಕ:17.07.2015
7. ಸರ್ಕಾರದ ಆದೇಶ ಸಂಖ್ಯೆ:ಪಜ 90 ಹೆಚ್ಎಹೆಚ್ 2015, ದಿನಾಂಕ:12.08.2015
8. ಸರ್ಕಾರದ ಆದೇಶ ಸಂಖ್ಯೆ:ಪಜ 88 ಹೆಚ್ಎಹೆಚ್ 2015, ದಿನಾಂಕ:24.11.2015.

ಪ್ರಸ್ತಾವನೆ:

C-7 9127

2010–11ನೇ ಸಾಲಿನಿಂದ ನಗರ ಆಶ್ರಯ ಯೋಜನೆಯನ್ನು ವಾಜಪೇಯಿ ನಗರ ವಸತಿ ಯೋಜನೆಯೆಂದು ಮರು ನಾಮಕರಣ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ಸದರಿ ಯೋಜನೆಯಡಿ ಪ್ರತಿ ಮನೆಯ ಘಟಕ ವೆಚ್ಚವು ರೂ.2,00,000ಗಳಾಗಿದ್ದು, ಇದರಲ್ಲಿ ರೂ.1,20,000 ರಾಜ್ಯ ಸರ್ಕಾರದ ಸಹಾಯಧನ ಹಾಗೂ ರೂ.30,000 ಫಲಾನುಭವಿಗಳ ಕಡ್ಡಾಯ ವಂತಿಕೆ ಮತ್ತು ರೂ.50,000 ಬ್ಯಾಂಕಿನಿಂದ ಸಾಲ ಅಥವಾ ಫಲಾನುಭವಿಯ ವಂತಿಕೆಯಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(2)ರ ಸುತ್ತೋಲೆಯಲ್ಲಿ, ಸರ್ಕಾರದ ವಸತಿ ಯೋಜನೆಗಳಡಿ ಫಲಾನುಭವಿಗಳ ಆಯ್ಕೆ ಮಾಡುವ ವಿಧಾನವನ್ನು ರೂಪಿಸಲಾಗಿದೆ.

ವಾಜಪೇಯಿ ನಗರವಸತಿ ಯೋಜನೆಯಡಿ ಸಹಾಯಧನ ನೀಡುವ ಫಲಾನುಭವಿಗಳ ಆಯ್ಕೆಗೆ, ಮೇಲೆ ಓದಲಾದ ಕ್ರಮಾಂಕ(3)ರ ಸರ್ಕಾರದ ಆದೇಶದಲ್ಲಿ ವರ್ಗವಾರು ಮೀಸಲಾತಿಯನ್ನು ನಿಗದಿಗೊಳಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ(4)ರ ಸರ್ಕಾರದ ಆದೇಶದಲ್ಲಿ 2015–16ನೇ ಸಾಲಿಗೆ ನಿಗದಿಯಾದ ಗುರಿಯಲ್ಲಿ 8150 ಮನೆಗಳ ನಿರ್ಮಾಣದ ಗುರಿಗೆ ಮಂಜೂರಾತಿ ನೀಡಲಾಗಿದೆ.

2

ಮೇಲೆ ಓದಲಾದ ಕ್ರಮಾಂಕ(5)ರ ಸರ್ಕಾರದ ಆದೇಶದಲ್ಲಿ 2015–16ನೇ ಸಾಲಿಗೆ ನಿಗದಿಯಾದ ಗುರಿಯಲ್ಲಿ 7030 ಮನೆಗಳ ನಿರ್ಮಾಣದ ಗುರಿಗೆ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ(6)ರ ಸರ್ಕಾರದ ಆದೇಶದಲ್ಲಿ 2015–16ನೇ ಸಾಲಿಗೆ ನಿಗದಿಯಾದ ಗುರಿಯಲ್ಲಿ 1050 ಮನೆಗಳ ನಿರ್ಮಾಣದ ಗುರಿಗೆ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ(7)ರ ಸರ್ಕಾರದ ಆದೇಶದಲ್ಲಿ 2015–16ನೇ ಸಾಲಿಗೆ ನಿಗದಿಯಾದ ಗುರಿಯಲ್ಲಿ 5050 ಮನೆಗಳ ನಿರ್ಮಾಣದ ಗುರಿಗೆ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ(8)ರ ಸರ್ಕಾರದ ಆದೇಶದಲ್ಲಿ 2015–16ನೇ ಸಾಲಿಗೆ ನಿಗದಿಯಾದ ಗುರಿಯಲ್ಲಿ 7600 ಮನೆಗಳ ನಿರ್ಮಾಣದ ಗುರಿಗೆ ಮಂಜೂರಾತಿ ನೀಡಲಾಗಿದೆ.

..2

ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ 2015-16ನೇ ಸಾಲಿನಲ್ಲಿ ಮಾನ್ಯ ಶಾಸಕರ ಬೇಡಿಕೆಯನ್ನು ಪರಿಗಣಿಸಿ, ಸಾಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸಾಗರ ಪಟ್ಟಣಕ್ಕೆ 100 ಮನೆಗಳನ್ನು ಹೆಚ್ಚುವರಿಯಾಗಿ ಮಂಜೂರಾತಿ ಮಾಡಲು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಪ�ಣ 88 ಹೆಚ್‌ಎಹೆಚ್ 2015, ಬೆಂಗಳೂರು, ದಿನಾಂಕ:14.01.2016

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ವಾಜಪೇಯಿ ನಗರ ವಸತಿ ಯೋಜನೆಯಡಿ 2015-16ನೇ ಸಾಲಿಗೆ ನಿಗದಿಯಾದ ಗುರಿಗೆ ಎದುರಾಗಿ ಈಗಾಗಲೇ ಮಂಜೂರಾತಿ ನೀಡಲಾದ 8150+7030+1050+5050+7600 ರ ಮನೆಗಳ ಜೊತೆಗೆ ಸಾಗರ ವಿಧಾನಸಭಾ ಕ್ಷೇತ್ರದ ಸಾಗರ ಪಟ್ಟಣಕ್ಕೆ ಹೆಚ್ಚುವರಿಯಾಗಿ 100 ಮನೆಗಳ ಗುರಿಯನ್ನು ಹಂಚಿಕೆ ಮಾಡಲು ಮಂಜೂರಾತಿ ನೀಡಲಾಗಿದೆ. 2015-16ನೇ ಸಾಲಿನ ಫಲಾನುಭವಿಗಳ ಆಯ್ಕೆಯ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.30,000.00ಗಳ ಫಲಾನುಭವಿಯ ಪಾಲಿಗೆಯನ್ನು ಸರ್ಕಾರದ ವತಿಯಿಂದಲೇ ಭರಿಸಲಾಗುವುದು. ಈ ವಸತಿ ಯೋಜನೆಯ ಉದ್ದೇಶಕ್ಕಾಗಿ ಬೇಕಾಗುವ ಅನುದಾನದ ಮೊತ್ತವನ್ನು 2015-16ನೇ ಸಾಲಿನ ಆಯವ್ಯಯದಲ್ಲಿ ವಾಜಪೇಯಿ ನಗರ ವಸತಿ ಯೋಜನೆಗಾಗಿ ಒದಗಿಸಲಾಗಿರುವ ಅನುದಾನದ ಮಿತಿಯೊಳಗೆ ಬಳಸಿಕೊಳ್ಳತಕ್ಕದ್ದು.

ಸದರಿ ಮನೆಗಳ ನಿರ್ಮಾಣದ ಸಹಾಯಧನ ನೀಡಲು, ಮೇಲೆ ಕ್ರಮಾಂಕ(2) ಮತ್ತು (3)ರಲ್ಲಿ ಓದಲಾದ ಸರ್ಕಾರದ ಸುತ್ತೋಲೆ ಮತ್ತು ಆದೇಶಗಳನ್ವಯ ಫಲಾನುಭವಿಗಳ ಆಯ್ಕೆಯನ್ನು ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಸಮೀರ್ ಮಜಿಮನ್)
ಸರ್ಕಾರದ ಅಧೀನ ಕಾರ್ಯದರ್ಶಿ-2.
ವಸತಿ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು
4. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ.
5. ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನ ಉಪ ವಿಭಾಗಾಧಿಕಾರಿಗಳು
6. ತಹಶೀಲ್ದಾರ್‌ರವರು, ಸಾಗರ ತಾಲ್ಲೂಕು.
7. ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಸಾಗರ.
8. ರಾಮಾ ರಕ್ಷಾಕಡತ/ಹೆಚ್ಚುವರಿ ಪ್ರತಿ

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ

...3

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.